# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ವೆಂಕಟೇಶ ಹೆಚ್. ಕುಲಕರ್ಣಿ, ದ್ವಿ.ದ.ಲೆಕ್ಕಸಹಾಯಕ, ಕಾಡಾ, ಕಲಬುರಗಿ, ಇವರ ವೈದ್ಯಕೀಯ ವೆಚ್ಚವನ್ನು ಮರುಪಾವತಿಸುವ ಕುರಿತು.

ಓದಲಾಗಿದೆ: 1. ಆಡಳಿತಾಧಿಕಾರಿ, ಕಾಡಾ ನೀರಾವರಿ ಯೋಜನೆಗಳ ವಲಯ, ಕಲಬುರಗಿ, ಇವರ ದಿನಾಂಕ:06.12.2019ರ ಪತ್ರ ಸಂಖ್ಯೆ:ಕಾಡಾ/ನಿಯೋವ/ಸಿಬ್ಬಂದಿ-2/ವೈ.ಬಿಲ್ಲು/ಮ.ಪಾವತಿ/2019-20/1146.

2. ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು, ಇವರ ದಿನಾಂಕ:14.11.2019ರ ಪತ್ರ ಸಂಖ್ಯೆ:ಆಕುಕ/ಎಸ್.ಎ.ಎಸ್.ಟಿ/ಎಂಆರ್‌ಸಿ/53/2019-20.

* * *

**ಪ್ರಸ್ತಾವನೆ:**

ಶ್ರೀ ವೆಂಕಟೇಶ ಹೆಚ್. ಕುಲಕರ್ಣಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಆಡಳಿತಾಧಿಕಾರಿಗಳ ಕಚೇರಿ, ಕಾಡಾ, ನೀರಾವರಿ ಯೋಜನೆಗಳ ವಲಯ, ಕಲಬುರಗಿ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ತಮ್ಮ ಪತ್ನಿಯಾದ ಶ್ರೀಮತಿ ರಾಧಿಕಾ ಕುಲಕರ್ಣಿ ರವರಿಗೆ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿಲ್ಲದ ಖಾಸಗಿ ಆಸ್ಪತ್ರೆಯಾದ Konin Maternity & Nursing Home ಕಲಬುರಗಿ ಇಲ್ಲಿ ಹೆರಿಗೆಗೆ ಸಂಬಂಧಿಸಿದ ಚಿಕಿತ್ಸೆ ಕೊಡಿಸಿದ್ದು, ಸದರಿ ಚಿಕಿತ್ಸೆ ಪಡೆದಿರುವ ಆಸ್ಪತ್ರೆಯು ಖಾಸಗಿ ಆಸ್ಪತ್ರೆಯಾಗಿರುವುದರಿಂದ ಇವರು ಮಾಡಿರುವ ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಸರ್ಕಾರದ ವಿಶೇಷ ಮಂಜೂರಾತಿ ನೀಡಿ ಮರುಪಾವತಿಸುವಂತೆ ಕೋರಿ ಮೇಲೆ (1)ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಆಡಳಿತಾಧಿಕಾರಿ, ಕಾಡಾ, ನೀರಾವರಿ ಯೋಜನೆಗಳ ವಲಯ, ಕಲಬುರಗಿ, ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಶ್ರೀ ವೆಂಕಟೇಶ ಹೆಚ್. ಕುಲಕರ್ಣಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಇವರು ತಮ್ಮ ಪತ್ನಿಯಾದ ಶ್ರೀಮತಿ ರಾಧಿಕಾ ಕುಲಕರ್ಣಿ ರವರಿಗೆ ಒಂದು ವೇಳೆ ಚಿಕಿತ್ಸೆಯನ್ನು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದಲ್ಲಿ, ಸದರಿ ಚಿಕಿತ್ಸೆಗೆ ರೂ.8,625.00 (ಎಂಟು ಸಾವಿರದ ಆರುನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ) ವೆಚ್ಚವಾಗುತ್ತಿತ್ತು ಎಂದು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರು ಅಭಿಪ್ರಾಯ ನೀಡಿರುತ್ತಾರೆ.

2. ಶ್ರೀ ವೆಂಕಟೇಶ ಹೆಚ್. ಕುಲಕರ್ಣಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಇವರು ತಮ್ಮ ಪತ್ನಿಯಾದ ಶ್ರೀಮತಿ ರಾಧಿಕಾ ಕುಲಕರ್ಣಿ ರವರಿಗೆ ಚಿಕಿತ್ಸೆ ಕೊಡಿಸಿದ ಸಂದರ್ಭ ಮತ್ತು ಸನ್ನಿವೇಶಗಳನ್ನು ಪರಿಗಣಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ

ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮ 31 ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 14 ನ್ನು ಸಡಿಲಿಸಿ, ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 14 ಐಪಿಜೆಡ್ 2019 (ಇ-ಆಫೀಸ್)**

**ಬೆಂಗಳೂರು, ದಿನಾಂಕ: 07.02.2020**

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರ ನಿಯಮ 31 ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 14 ನ್ನು ಸಡಿಲಿಸಿ, ಶ್ರೀ ವೆಂಕಟೇಶ ಹೆಚ್. ಕುಲಕರ್ಣಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಆಡಳಿತಾಧಿಕಾರಿಗಳ ಕಚೇರಿ, ಕಾಡಾ, ನೀರಾವರಿ ಯೋಜನೆಗಳ ವಲಯ, ಕಲಬುರಗಿ, ಇವರು ತಮ್ಮ ಪತ್ನಿಯಾದ ಶ್ರೀಮತಿ ರಾಧಿಕಾ ಕುಲಕರ್ಣಿ ರವರಿಗೆ ಚಿಕಿತ್ಸೆ ಕೊಡಿಸಲು ಮಾಡಿರುವ ವೈದ್ಯಕೀಯ ಚಿಕಿತ್ಸಾ ವೆಚ್ಚದಲ್ಲಿ ಮರುಪಾವತಿಗೆ ಅರ್ಹವಾಗಿರುವ ಮೊತ್ತ ರೂ.8,625.00 ಗಳನ್ನು (ಎಂಟು ಸಾವಿರದ ಆರುನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ) ಈ ಕೆಳಕಂಡ ಷರತ್ತಿಗೊಳಪಟ್ಟಂತೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 31 ಎಸ್ಎಂಆರ್ 2014, ದಿನಾಂಕ: 05.11.2015ರಲ್ಲಿ ಇಲಾಖೆಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಮರುಪಾವತಿಸಲು ಸರ್ಕಾರವು ವಿಶೇಷ ಮಂಜೂರಾತಿ ನೀಡಿದೆ.

1. ಸರ್ಕಾರಿ ನೌಕರನ ಮಕ್ಕಳು/ತಂದೆ/ತಾಯಿ ವೈದ್ಯಕೀಯ ವೆಚ್ಚ ಮರುಪಾವತಿಯ ಪ್ರಕರಣಗಳಲ್ಲಿ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 2 ರನ್ವಯ ಸಂಪೂರ್ಣವಾಗಿ ಅವಲಂಬಿತರಾಗಿದ್ದಲ್ಲಿ ಮಾತ್ರ ವೈದ್ಯಕೀಯ ವೆಚ್ಚ ಮರುಪಾವತಿಯ ಪ್ರಕರಣಗಳನ್ನು ಪರಿಶೀಲಿಸತಕ್ಕದ್ದು.

2. ಸರ್ಕಾರಿ ನೌಕರನು ಕರ್ನಾಟಕ ಆರ್ಥಿಕ ಸಂಹಿತೆ 1958ರ ಕಲಂ 146(A)(ii) ರ ಪ್ರಕಾರ ಸೂಕ್ತ ಕಾಲದಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿಯ ಕ್ಲೈಂ ಅನ್ನು ಮೂಲ ದಾಖಲೆಗಳೊಂದಿಗೆ ಸಲ್ಲಿಸಿದ್ದಾರೆಯೇ? ಇಲ್ಲದಿದ್ದಲ್ಲಿ ಕಾಲವಿಳಂಬ ಮನ್ನಾ ಮಾಡುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಆದೇಶ ಹೊರಡಿಸಿದ ನಂತರವೇ ವೈದ್ಯಕೀಯ ವೆಚ್ಚ ಮರುಪಾವತಿಗೆ ಸಹಮತಿಸತಕ್ಕದ್ದು.

3. ಕ್ಲೈಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರ ಮೂಲದಿಂದ ಹಿಂಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

4. ಸರ್ಕಾರಿ ನೌಕರರ ಪತ್ನಿ/ಪತಿಯು ರಾಜ್ಯ/ಕೇಂದ್ರ ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಸಂಸ್ಥೆಯ ನೌಕರರಾಗಿದ್ದಲ್ಲಿ ಅವರು ಈ ಬಗ್ಗೆ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಜಿ ಸಲ್ಲಿಸಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

5. ಸರ್ಕಾರಿ ನೌಕರರ ತಂದೆ/ತಾಯಿಯ ವೈದ್ಯಕೀಯ ವೆಚ್ಚದ ಮರುಪಾವತಿ ಪ್ರಕರಣಗಳಲ್ಲಿ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 2ರಲ್ಲಿನ ವಿವರಣೆ II ರಲ್ಲಿನ ಷರತ್ತು ಮತ್ತು ನಿಗಧಿಪಡಿಸಿರುವ ಮಾಸಿಕ ವರಮಾನ ಮೀರದ ಪ್ರಕರಣಗಳಲ್ಲಿ ಮಾತ್ರ ವೈದ್ಯಕೀಯ ವೆಚ್ಚ ಮರುಪಾವತಿಸಲು ಸಹಮತಿ ನೀಡತಕ್ಕದ್ದು.

6. ಯಾವುದೇ ಕಾರಣಕ್ಕೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶಕರು ಶಿಫಾರಸ್ಸು ಮಾಡುವ ಮೊಬಲಗನ್ನು ಮೀರಿ ವೈದ್ಯಕೀಯ ವೆಚ್ಚ ಹಿಂಬರಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

7/2/2020

**(ರಂಗನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಕಾಡಾ)

7/2/20

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ) (ಜಿ & ಎಸ್‌ಎಸ್‌ಎ) ಮತ್ತು (ಇ & ಅರ್‌ಎಸ್‌ಎ) ಕರ್ನಾಟಕ, ಬೆಂಗಳೂರು.
2. ಆಡಳಿತಾಧಿಕಾರಿ, ಆಡಳಿತಾಧಿಕಾರಿಗಳ ಕಚೇರಿ, ಕಾಡಾ, ನೀರಾವರಿ ಯೋಜನೆಗಳ ವಲಯ, ಕಲಬುರಗಿ, (ಮೂಲ ವೈದ್ಯಕೀಯ ಬಿಲ್ಲುಗಳೊಂದಿಗೆ)
3. ಶ್ರೀ ವೆಂಕಟೇಶ ಹೆಚ್. ಕುಲಕರ್ಣಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಆಡಳಿತಾಧಿಕಾರಿಗಳ ಕಚೇರಿ, ಕಾಡಾ, ನೀರಾವರಿ ಯೋಜನೆಗಳ ವಲಯ, ಕಲಬುರಗಿ,
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.